

# ಕಟ್ಟಿಗೆಯಲ್ಲಿ ಕೈಚಳಕ!

ನಮ್ಮಲ್ಲಿ ಕಾಫಿ ಬೇರುಗಳಿಂದ ವಿವಿಧ ರೀತಿಯ ಕಲಾಕೃತಿಗಳನ್ನು ರಚಿಸುವುದನ್ನು ಕಾಣುತ್ತೇವೆ.

ವನ್ಯಮೃಗಗಳ ಕಲಾಕೃತಿಯನ್ನು ರಚಿಸುವಲ್ಲಿ ಸಿದ್ದಹಸ್ತರಾಗಿರುವ ಇಂಗ್ಲೆಂಡಿನ ದಕ್ಷಿಣ ಗ್ಲಾಸೆಸ್ಟರ್‌ಶೈನ್‌ನ ಪುಟ್ಟ ಹಳ್ಳಿ ಪೆನ್ಸಿಲ್‌ವೇನಿಯಾದಲ್ಲಿರುವ ರ್‍ಯಾಂಡಲ್ ಡಿ. ಬೋನಿ ಕಟ್ಟಿಗೆ ದಿಮ್ಮಿಗಳಲ್ಲಿ ವನ್ಯಮೃಗಗಳನ್ನು ರಚಿಸಿ ರಸ್ತೆ ಬದಿಯಲ್ಲಿ ಇಟ್ಟಿರುತ್ತಾರೆ.

ಚೈನ್ ಸಾ (ಯಂತ್ರದ ಗರಗಸ) ಬಳಸಿ ರಚಿಸಿರುವ ಇವರ ಕಟ್ಟಿಗೆ ವನ್ಯ ಪ್ರಾಣಿಗಳ ಕೃತಿಗಳು ದಾರಿಹೋಕರನ್ನು ಕ್ಷಣ ಕಾಲ ಮಂತ್ರಮುಗ್ಧರನ್ನಾಗಿಸುತ್ತವೆ. ಇವರು ಚಿಕ್ಕ ವಯಸ್ಸಿನಿಂದಲೂ ಈ ಕಲೆಯನ್ನು ಕರಗತ ಮಾಡಿಕೊಳ್ಳುವ ಮೂಲಕ ಕಟ್ಟಿಗೆಯಲ್ಲಿ ತಮ್ಮ ಕೈಚಳಕ ತೋರಿಸುತ್ತಿದ್ದಾರೆ. ಗಾಳಿ ಮಳೆಗೆ ಮುರಿದು ಬೀಳುವ ಮರಗಳನ್ನು ಹುಡುಕಿ ತೆಗೆದು ಅದರಲ್ಲಿ ಕಲಾಕೃತಿ ಮಾಡುವುದು ಇವರ ಹವ್ಯಾಸ.

■ ವಸಂತ್ ಮಾಲವಿ

